ಗರಿಷ್ಠ 40°c | ಕನಿಷ್ಠ 24°c

ಕನ್ನಡಪ್ರಭ
ಸೋಮವಾರ 4.05.2026

ಸುದ್ದಿ ಸಿಂಚನ

31ಕ್ಕೆ ವೀರಶೈವ ಲಿಂಗಾಯತ ವಧು-ವರರ ಸಮಾವೇಶ

ವಿಜಯಪುರ: ವೀರಶೈವ ಲಿಂಗಾಯತ ಎಲ್ಲ ಉಪಪಂಗಡಗಳ ವಧು- ವರರ ಸಮಾವೇಶವನ್ನು 2026 ಮೇ 31ರಂದು ಬೆಳಗ್ಗೆ 10.30ಕ್ಕೆ ನಗರದ ಬಂಜಾರಾ ಕಾಲೇಜು ಎದುರಿಗಿರುವ ವೀರಶೈವ ಲಿಂಗಾಯತ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಭಾಗವಹಿಸಿ ಇದರ ಲಾಭವನ್ನು ಪಡೆದುಕೊಳ್ಳಬೇಕು. ಭಾಗವಹಿಸಲು ಇಚ್ಚಿಸುವವರು ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ಮೊ. 9972893998, 9448279250, 9342280804, 7259222887 ಸಂಪರ್ಕಿಸಿ.

ಹೇಮರೆಡ್ಡಿ ಮಲ್ಲಮ್ಮನ ಪುರಾಣ ಪ್ರಾರಂಭ ನಾಳೆ

ದೇವರಹಿಪ್ಪರಗಿ: ತಾಲೂಕಿನ ಡೋಣಿ ಕಡಕೋಳ ಗ್ರಾಮದ ಗುರು ಮಡಿವಾಳೇಶ್ವರ ಗದ್ದುಗೆ



ಹಿರೇಮಠದಲ್ಲಿ ಮೇ.05ರಿಂದ 24ರ ವರೆಗೆ ದೇವರಹಿಪ್ಪರಗಿ ಪಟ್ಟಣದ ಜಡಿಮಠದ ಜಡೆ ಸಿದ್ದೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಮಹಾಪುರಾಣ ನಿತ್ಯ ಸಂಜೆ 7ಕ್ಕೆ ಜರುಗಲಿದೆ ಎಂದು ಶ್ರೀಗುರು ಮಠದ ಮಡಿವಾಳೇಶ್ವರ ಶ್ರೀಗಳು ತಿಳಿಸಿದ್ದಾರೆ. ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಶ್ರೀಗಳು, ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ 1008 ಜಗದ್ಗುರು ಡಾ.ಚನ್ನ ಸಿದ್ದರಾಮ ಪಂಡಿತಾರಾಧ್ಯ, ಶಿವಾಚಾರ್ಯ ಭಗವತ್ಪಾದರು ಶ್ರೀಶೈಲ ಪೀಠ ಇವರ ಅಮೃತ ಹಸ್ತದಿಂದ ಅಡಿಗಲ್ಲು ಸಮಾರಂಭ, ಹಾನಗಲ್ ಕುಮಾರ ಶಿವಯೋಗಿಗಳ 158ನೇ ಜಯಂತ್ಯುತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆಯೋಜಿಸಲಾಗಿದೆ. ಮೇ.20ರಂದು ಸಂಜೆ 7 ಗಂಟೆಗೆ ಯುವಜನೋತ್ಸವ, ಮೇ. 21ರಂದು 7ಕ್ಕೆ ರೈತರ ಘೋಷ್ಠಿ, ಮೇ.22 ಸಂಜೆ 7ಕ್ಕೆ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ ಹಾಗೂ ಮಹಿಳಾ ಘೋಷ್ಠಿ, ಮೇ.23ರಂದು ಸಂಜೆ 7ಕ್ಕೆ ತುಲಾಭಾರ, ಮೇ.24ರಂದು ಬೆಳಗ್ಗೆ 7ಕ್ಕೆ ಬಸವೇಶ್ವರ ಕರ್ತೃ ಗದ್ದುಗೆ ಮಹಾರುದ್ರಾಭಿಷೇಕ ಬಿಲ್ವಾರ್ಚನೆ, ಬೆಳಗ್ಗೆ 9ಕ್ಕೆ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣ ಹಾಗೂ ಸಂಜೆ 4ಕ್ಕೆ ಧರ್ಮಸಭೆ ಕಾರ್ಯಕ್ರಮ ನಡೆಯಲಿದೆ. ಶಾಸಕ ರಾಜುಗೌಡ ಪಾಟೀಲ, ಮಾಜಿ ಶಾಸಕ ಸೋಮನಗೌಡ ಪಾಟೀಲ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ, ಬಿಜೆಪಿ ಮುಖಂಡರಾದ ಬಸನಗೌಡ ಪಾಟೀಲ ಸೇರಿ ಅನೇಕ ರಾಜಕೀಯ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಅಂದು ಶ್ರೀಶೈಲ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವದ ಪ್ರಯುಕ್ತ ಆರತಿ, ಕುಂಭ, ಕಳಸ, ಕನ್ನಡಿ, ಡೊಳ್ಳು ಬಾಜಿ ಹಾಗೂ ಭಜಂತ್ರಿ ಯೊಂದಿಗೆ ಅದ್ದೂರಿಯಾಗಿ ದೇವಸ್ಥಾನ ತಲುಪುವುದು. ಅಂದು ಗ್ರಾಮಸ್ಥರು, ಶ್ರೀಮಠದ ಭಕ್ತರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಜಗದ್ಗುರುಗಳ ಕೃಪಾಶೀರ್ವಾದ ಪಡೆಯಬೇಕು ಎಂದರು.

ಸತ್ಯವತಿ ಕೊಣದಿ ನಿಧನ

ವಿಜಯಪುರ: ನಗರದ ಹೊರವಲಯದ ಇಟ್ಟಂಗಿಹಾಳ




ಗ್ರಾಮದ ಸತ್ಯವತಿ ಬಸಗೊಂಡಪ್ಪ ಕೊಣದಿ (85) ನಿಧನರಾಗಿದ್ದಾರೆ. ಮೃತರಿಗೆ ವಿಜಯಪುರ ಜಿಒಸಿಸಿ ಬ್ಯಾಂಕಿನ ನಿರ್ದೇಶಕ ಹಣಮಂತ ಕೊಣದಿ ಸೇರಿ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂದು ಬಳಗವಿದೆ. ಮೃತರ ಅಂತ್ಯಕ್ರಿಯೆಯು ಭಾನುವಾರ ಬೆಳಗ್ಗೆ ಸ್ವಗ್ರಾಮ ಇಟ್ಟಂಗಿಹಾಳ ತೋಟದಲ್ಲಿ ನೆರವೇರಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಜಲಾಶಯ ಮಟ್ಟ

ಆಲಮಟ್ಟಿ

- ಗರಿಷ್ಠ ಮಟ್ಟ....................519.60ಮೀ.
- ಇಂದಿನ ಮಟ್ಟ................509.73ಮೀ.
- ಒಳಹರಿವು........................ಇಲ್ಲ
- ಹೊರಹರಿವು....................4,375 ಕ್ಯು



ಸಿಂದಗಿ ತಾಲೂಕಿನ ಗುಬ್ಬೇವಾಡ ಗ್ರಾಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಗುಬ್ಬೇವಾಡದಲ್ಲಿ ನೂತನವಾಗಿ ನಿರ್ಮಾಣವಾದ 1X10 ಎಂ.ವ್ಹಿ.ಎ, 110/11 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಶಾಸಕ ಅಶೋಕ ಮನಗೂಳಿ ಚಾಲನೆ ನೀಡಿದರು.

ನೂತನ ವಿದ್ಯುತ್ ಕೇಂದ್ರಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ** ಸಿಂದಗಿ

ಈ ಭಾಗದ ರೈತರ ಹೋರಾಟದ ಫಲವಾಗಿ ಇಂದು ಈ ನೂತನ ವಿದ್ಯುತ್ ಕೇಂದ್ರ ತಲೆ ಎತ್ತಿ ನಿಂತಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾಲೂಕಿನ ಗುಬ್ಬೇವಾಡ ಗ್ರಾಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಗುಬ್ಬೇವಾಡದಲ್ಲಿ ನೂತನವಾಗಿ ನಿರ್ಮಾಣವಾದ 1X10 ಎಂ.ವ್ಹಿ.ಎ, 110/11 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು. ಮೂಲ ಸೌಕರ್ಯದಿಂದ ವಂಚಿತರಾದ ಗುಬ್ಬೇವಾಡ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸತತ 2 ವರ್ಷಗಳ ಪ್ರಯತ್ನದಿಂದ ನೂತನ ವಿದ್ಯುತ್ ಕೇಂದ್ರ ನಿರ್ಮಿಸಿದ್ದು, ಸಂತಸ ತಂದಿದೆ. ರೈತರಿಗೆ ಗುಣಮಟ್ಟದ ವಿದ್ಯುತ್ ವ್ಯವಸ್ಥೆ ನೀಡುವ ಮಹದಾಸೆ ಹೊಂದಿದ್ದೇನೆ. ಈ ವರ್ಷ ಸರಕಾರ ಕೊರಳ್ಳಿ ಗ್ರಾಮಕ್ಕೆ ಸರಕಾರಿ ಪಿಯು ಕಾಲೇಜು ನೀಡಿದೆ. ಮುಂದಿನ ದಿನಮಾನಗಳಲ್ಲಿ ಗುಬ್ಬೇವಾಡ ಗ್ರಾಮಕ್ಕೂ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಬಾಗಲಕೋಟೆಯ ಕವಿಪ್ರನಿನಿ ಅಧೀಕ್ಷಕ ಎಂಜನಿಯರ್‌ರಮೇಶ ಪವಾರ, ಅಡಿವೇಶ್ವರ ಶ್ರೀಗಳು, ಎಪಿಎಂಸಿ ನಿರ್ದೇಶಕ ಸದ್ದಾಂ ಪಟೇಲ, ರೈತ ಸಂಘದ ತಾಲೂಕಾಧ್ಯಕ್ಷ ಧರ್ಮಣ್ಣ ಗಬಸಾವಳಗಿ, ದೇವರಾಜ ನರಗೋದಿ, ಮುತ್ತುಗೌಡ ಪಾಟೀಲ, ಬಾಪುಗೌಡ ಪಾಟೀಲ ಮಾತನಾಡಿದರು. ಅಧಿಕಾರಿಗಳಾದ ಜಗದೀಶ ಜಾಧವ, ವಾಹೀದ ಜಹಾಗೀರರಾದ, ಚಂದ್ರಕಾಂತ ನಾಯಕ ಮತ್ತು ರಮೇಶ ಪವಾರ, ಸಂತೋಷ ಸಾಲಿ, ಎಸ್.ವೈ.ಕೊಂಡಗೂಳಿ, ಬಸವರಾಜ ಮಾರಲಭಾವಿ, ಭೂದಾನಿ ಬೋರಮ್ಮ ತಳವಾರ, ರಮೇಶ ಗುಬ್ಬೇವಾಡ, ನಿಂಗಪ್ಪ ಭಾವಿಕಟ್ಟಿ, ರಮೇಶ ಇಜೇರಿ, ಸಿದ್ದು ಅಂಗಡಿ, ಗುಬ್ಬೇವಾಡ ಗ್ರಾಮಸ್ಥರು, ಇತರರು ಇದ್ದರು.



ಪಂಚಸೈಯದ ದರ್ಗಾ ಉರುಸ್ ಪ್ರಾರಂಭ

ತಾಳಿಕೋಟೆ: ಪಟ್ಟಣದ ಹಜರತ್ ಫೀರ ಪಂಚಸೈಯದ ದರ್ಗಾ ಉರುಸು ಭಾನುವಾರದಿಂದ ಪ್ರಾರಂಭಗೊಂಡಿದ್ದು, ಮೇ.4ರಂದು ದೀಪ ಹಚ್ಚುವುದು, 5ರಂದು ದೇವರ ಜಾರತ ಕಾರ್ಯಕ್ರಮಗಳು ಜರುಗಲಿವೆ. ಈ ದರ್ಗಾ ಉರುಸಿನ ಅಂಗವಾಗಿ ಮೊದಲಿನಿಂದಲೂ ಹಿಂದು-ಮುಸ್ಲಿಂ ಬಾಂದವರು ಭಾವೈಕ್ಯತೆ ಸಾರುವುದರೊಂದಿಗೆ ಎಡೆ, ಲೋಬಾನ, ಸಕ್ಕರೆ ನೀಡಿ ಪೂಜೆ ಸಲ್ಲಿಸುತ್ತಾ ಬಂದಿದ್ದು, ಅದರಂತೆ ಈ ಬಾರಿಯು ಸಹ ಭಾವೈಕ್ಯತೆಯೊಂದಿಗೆ ಉರುಸು ಕಾರ್ಯಕ್ರಮ ನಡೆಯಲಿದೆ ಎಂದು ದರ್ಗಾ ಕಮಿಟಿಯ ಸರಪರಾಜ ಮುಲ್ಲಾ ತಿಳಿಸಿದ್ದಾರೆ.

ಸರ್ಕಾರಿ ಪಾಲಿಟೆಕ್ನಿಕ್‌ಗೆ ವಿದ್ಯಾರ್ಥಿಗಳ ಕೊರತೆ

ಎಲ್ಲ ಸೌಲಭ್ಯ ಹೊಂದಿದ್ದರೂ ನಿರರ್ಥಕ | ಪಟ್ಟಣದಿಂದ ತುಂಬಾ ದೂರ ಎಂಬ ಕಾರಣ

• **ಬಸವರಾಜ ನಂದಿಹಾಳ**
ಕನ್ನಡಪ್ರಭ ವಾರ್ತೆ ಬಸವನಬಾಗೇವಾಡಿ

ಪಟ್ಟಣದಿಂದ 8 ಕಿ.ಮೀ. ಅಂತರದಲ್ಲಿರುವ ಟಕ್ಕಳಕಿ ಗ್ರಾಮ ಹತ್ತಿರದ ಸರ್ಕಾರಿ ಪಾಲಿಟೆಕ್ನಿಕ್ 2021ರಲ್ಲಿ ಆರಂಭವಾದರೂ ವಿದ್ಯಾರ್ಥಿಗಳು ಬೆರಳಣಿಕೆಯಷ್ಟು ಪ್ರವೇಶ ಪಡೆದುಕೊಳ್ಳುತ್ತಿದ್ದಾರೆ. ಪಾಲಿಟೆಕ್ನಿಕ್ ಎಲ್ಲ ಸೌಲಭ್ಯ ಹೊಂದಿದ್ದರೂ ನಿರರ್ಥಕವಾಗುತ್ತಿದೆ. ಪ್ರಸ್ತುತ 2 ವಿಭಾಗ ಸೇರಿದಂತೆ 55 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪಾಲಿಟೆಕ್ನಿಕ್ ಪಟ್ಟಣದಿಂದ ತುಂಬಾ ದೂರ ಎಂಬ ಕಾರಣಕ್ಕೆ ಪ್ರವೇಶಗಳು ಕಡಿಮೆಯಾಗುತ್ತವೆ ಎಂಬ ಮಾತು ಕೇಳಿಬರುತ್ತಿವೆ. ವಿವಿಧೆಡೆಗಳಿಂದ ಬರುವ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುವ ಕಾರಣದಿಂದ ಪ್ರವೇಶ ಪಡೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೊಲ್ಹಾರಕ್ಕೆ ತೆರಳುವ ಬಸ್ ಬೆಳಗ್ಗೆ 9ಕ್ಕೆ ಮತ್ತು ಸಂಜೆ 4ಕ್ಕೆ ಪಾಲಿಟೆಕ್ನಿಕ್ ಬಂದು ಹೋಗುವ ವ್ಯವಸ್ಥೆ ಕಲ್ಪಿಸಲಾಗಿದೆ. ಇನ್ನೂ ಹೆಚ್ಚಿನ ಬಸ್ ಸೌಲಭ್ಯ ಮಾಡುವ ಅಗತ್ಯವಿದೆ. ಪಾಲಿಟೆಕ್ನಿಕ್ ಹೋಗಲು ಅಂದಾಜು ₹ 5 ಕೋಟಿ ವೆಚ್ಚದಲ್ಲಿ ಡಾಂಬರ್‌ರಸ್ತೆ ನಿರ್ಮಿಸಲಾಗಿದೆ. ಆದರೂ ನಿಷ್ಪ್ರಯೋಜಕವಾಗಿದೆ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಸೌಲಭ್ಯ ಸಿಗಬೇಕೆಂಬ ಸದುದ್ದೇಶದಿಂದ ಪಟ್ಟಣದಿಂದ 8 ಕಿ.ಮೀ. ದೂರವಿರುವ ಮೊರಾರ್ಜಿ ವಸತಿ ಶಾಲೆ ಕ್ರಾಸ್‌ದಿಂದ 800 ಮೀಟರ್‌ಒಳಗಡೆ ವಿಶಾಲವಾದ ಸರ್ಕಾರಿ ಜಾಗದಲ್ಲಿ ಈ ಪಾಲಿಟೆಕ್ನಿಕ್



ಕಟ್ಟಡ ನಿರ್ಮಿಸಿ ಅಗತ್ಯ ಸೌಲಭ್ಯವನ್ನು ಸರ್ಕಾರ ಒದಗಿಸಿದೆ. ಈ ಪಾಲಿಟೆಕ್ನಿಕ್ ಆರಂಭವಾದಾಗ ಆಟೋಮೊಬೈಲ್ ಇಂಜಿನಿಯರಿಂಗ್, ಫುಡ್ ಪ್ರೊಸೆಸಿಂಗ್ ಆ್ಯಂಡ್ ಪ್ರಿಜರ್ವೇಶನ್ ಇಂಜಿನಿಯರಿಂಗ್ 2 ವಿಭಾಗಗಳಿಗೆ ತಲಾ 60 ವಿದ್ಯಾರ್ಥಿಗಳನ್ನು ದಾಖಲಿಸಲು ಅವಕಾಶವಿತ್ತು. ಆರಂಭದಲ್ಲಿ 2 ವಿಭಾಗ ಸೇರಿ 70 ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿದ್ದರು. ಈಗಾಗಲೇ 2 ಬ್ಯಾಚ್ ವಿದ್ಯಾರ್ಥಿಗಳು ವ್ಯಾಸಂಗ ಪೂರ್ಣಗೊಳಿಸಿದ್ದಾರೆ. ಇದುವರೆಗೂ ಶೇ.100ರಷ್ಟು ಫಲಿತಾಂಶವಾಗಿದೆ. ಇದುವರೆಗೂ ಒಟ್ಟು 45 ವಿದ್ಯಾರ್ಥಿಗಳು ಈ ಪಾಲಿಟೆಕ್ನಿಕ್‌ದಿಂದ ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಕೆಲವರು ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. 3ನೇ ಬ್ಯಾಚ್ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಈ ಶೈಕ್ಷಣಿಕ ವರ್ಷದಲ್ಲಿ ಕಂಪ್ಯೂಟರ್‌ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ಮತ್ತು ಇಲೆಕ್ಟ್ರಾನಿಕ್ ಆ್ಯಂಡ್ ಕಮ್ಯೂನಿಕೇಶನ್ ಇಂಜನಿಯರಿಂಗ್ ಮತ್ತೆ 2 ವಿಭಾಗಗಳು ಆರಂಭವಾಗಲಿವೆ. ಇದಕ್ಕೂ ತಲಾ 60 ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಬಹುದು. ಈ ಪಾಲಿಟೆಕ್ನಿಕನಲ್ಲಿ 1 ಪ್ರಾಚಾರ್ಯ ಹುದ್ದೆಯಲ್ಲಿ ಪ್ರಭಾರಿ ಪ್ರಾಚಾರ್ಯ, 13 ಉಪನ್ಯಾಸಕರಲ್ಲಿ 3 ಉಪನ್ಯಾಸಕರು ಕಾಯಂ, 10 ಅತಿಥಿ ಉಪನ್ಯಾಸಕರು, 3 ಜನಕಾಯಂಸೊಪರಿಟೆಂಡೆಂಟ್, 4 ಎಫ್‌ಡಿಎ ಹುದ್ದೆಯಲ್ಲಿ ಇಬ್ಬರು ಕಾರ್ಯನಿರ್ವಹಿಸುತ್ತಿದ್ದರೆ 2 ಹುದ್ದೆ ಖಾಲಿ ಇವೆ. ಎಸ್.ಡಿ.ಎ 5 ಹುದ್ದೆಗಳೂ ಖಾಲಿ ಇವೆ. 1 ರಜಿಸ್ಟ್ರಾರ್ ಹುದ್ದೆಯು ಖಾಲಿಯಿದೆ. ಈ ಶೈಕ್ಷಣಿಕ ವರ್ಷದಲ್ಲಿ ಮತ್ತೆ 2 ವಿಭಾಗಗಳು ಆರಂಭವಾದ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಿಸಿದ ಉಪನ್ಯಾಸಕರು, ವಿವಿಧ ಹುದ್ದೆಗಳು ಅಗತ್ಯವಿದೆ. ಪಾಲಿಟೆಕ್ನಿಕ್ ಆವರಣದಲ್ಲಿ 85 ವಿದ್ಯಾರ್ಥಿನಿಯರಿಗೆ ವಸತಿ ನಿಲಯ ಕಟ್ಟಡ ಸಜ್ಜುಗೊಂಡು, ಕಾಲೇಜಿಗೆ ಹಸ್ತಾಂತರವಾಗಿ 6 ತಿಂಗಳಾಗಿದೆ. ವಸತಿನಿಲಯಇನ್ನೂ ಆರಂಭವಾಗಿಲ್ಲ. ವಸತಿ ನಿಲಯ ಆರಂಭವಾದರೆ ವಿದ್ಯಾರ್ಥಿನಿಯರು ಪ್ರವೇಶ ಪಡೆದುಕೊಳ್ಳಬಹುದು. ಈಚೆಗೆ ವರ್ಕ್‌ಶಾಪ್ ಕಟ್ಟಡವು ನಿರ್ಮಾಣವಾಗಿದೆ. ಕೆಲ ಉಪಕರಣಗಳು ಮಾತ್ರ ಬಂದಿವೆ. ಇನ್ನೂ ಹೆಚ್ಚಿನ ಅತ್ಯಾಧುನಿಕ ಉಪಕರಣಗಳು ಸೇರಿದಂತೆ ಅಗತ್ಯ ಉಪಕರಣಗಳು, ಪರ್ನಿಚರ್ ಬರಬೇಕಿದೆ. ಪಾಲಿಟೆಕ್ನಿಕ್ ಸುತ್ತಲೂ ಆವರಣಗೋಡೆ, ಸಮುದಾಯ ಭವನ, ಉದ್ಯಾನವನ, ಸೂಕ್ತ ಉಪಕರಣಗಳ ಅಗತ್ಯವಿದೆ.

- ಪಾಲಿಟೆಕ್ನಿಕ್ ಹೋಗಲು ಅಂದಾಜು ₹ 5 ಕೋಟಿ ವೆಚ್ಚದಲ್ಲಿ ಡಾಂಬರ್‌ರಸ್ತೆ ನಿರ್ಮಾಣ
- ಕಂಪ್ಯೂಟರ್‌ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ಮತ್ತು ಇಲೆಕ್ಟ್ರಾನಿಕ್ ಆ್ಯಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್ ಮತ್ತೆ 2 ವಿಭಾಗಗಳು ಆರಂಭ

ನಮ್ಮ ಕಾಲೇಜಿನಲ್ಲಿರುವ 4 ವೃತ್ತಿ ವಿಭಾಗಗಳಿಂದ ಸ್ವಯಂ ಉದ್ಯೋಗ ಸೇರಿದಂತೆ ವಿವಿಧ ಸರ್ಕಾರಿ, ಖಾಸಗಿ, ಕಂಪನಿಗಳಲ್ಲಿ ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ಅವಕಾಶವಿದೆ. ಸರ್ಕಾರ ಸಾಕಷ್ಟು ಸೌಲಭ್ಯ ಒದಗಿಸಿದೆ. ನಮ್ಮ ಕಾಲೇಜಿನ ಬಗ್ಗೆ ಅಖಂಡ ಬಸವನಬಾಗೇವಾಡಿ ತಾಲೂಕಿನಲ್ಲಿರುವ ಎಲ್ಲ ಪ್ರೌಢಶಾಲೆಗೆ ಭೇಟಿ ನೀಡಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶಾಲಾ ಆರಂಭ, ಕೊನೆಯಲ್ಲಿ ಮಾಹಿತಿ ನೀಡಲಾಗುತ್ತಿದೆ. ಫೂಡ್ ಪ್ರೊಸಸಿಂಗ್ ಆ್ಯಂಡ್ ಪ್ರಿಜರವೇಶನ್ (ಆಹಾರ ಸಂರಕ್ಷಣೆ ಮತ್ತು ಸಂಸ್ಕರಣಾ ವಿಭಾಗ) ರಾಜ್ಯದಲ್ಲಿ ಶಿರಾ, ಕೊಪ್ಪ ಬಿಟ್ಟರೆ ನಮ್ಮ ಕಾಲೇಜಿನಲ್ಲಿ ಮಾತ್ರ ಇದೆ. ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಿರುವುದನ್ನು ಸಚಿವ ಶಿವಾನಂದ ಪಾಟೀಲರು ಪೂರೈಸಿದ್ದಾರೆ. ಈಗಾಗಲೇ ಪ್ರವೇಶ ಆರಂಭವಾಗಿವೆ. ವಿದ್ಯಾರ್ಥಿಗಳು ನಮ್ಮ ಕಾಲೇಜಿನ ಪ್ರಯೋಜನ ಪಡೆದುಕೊಳ್ಳಬೇಕು.

• **ಡಾ.ನಟರಾಜ ಕುಂಟೋಜಿ,** ಪ್ರಭಾರಿ ಪಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್ ಬಸವನಬಾಗೇವಾಡಿ.(ಟಕ್ಕಳಕಿ)

ಕೆರೆಗಳಿಗೆ ನೀರು ತುಂಬಿಸಲು ಆಗ್ರಹ



• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ತಾಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸುವಂತೆ ಆಗ್ರಹಿಸಿ ರೈತ ಮುಖಂಡ ರಾಜುಗೌಡ ಕರಡ್ಡಿ ನೇತೃತ್ವದಲ್ಲಿ ತಹಸೀಲ್ದಾರ್ ಮೂಲಕ ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳಿಗೆ ಶನಿವಾರ ಮನವಿ ಸಲ್ಲಿಸಿದರು.

ಈಗಾಗಲೇ ಎಲ್ಲಡೆ ಬೇಸಿಗೆ ಪ್ರಾರಂಭಗೊಂಡಿದ್ದು, ಅಲ್ಲದೇ ಪ್ರತಿ ವರ್ಷಕ್ಕಿಂತಲೂ ಈ ವರ್ಷ ಬೇಸಿಗೆ ಬಿರುಬಿಸಿಲು ಹೆಚ್ಚಾಗಿದೆ. ಇದರಿಂದ ಕೃಷ್ಣಾ ನದಿ ನೀರು ಸಹ ಬತ್ತಿ ಹೋಗುತ್ತಿದೆ. ಆದ್ದರಿಂದ ಈಗಾಗಲೇ ತಾಲೂಕಿನಲ್ಲಿ ರೈತರು ಬಿತ್ತಿದ ಬೆಳೆಗಳಿಗೆ ನೀರು ಹರಿಸುವುದು ಅತ್ಯವಶ್ಯಕವಾಗಿದೆ. ಜತೆಗೆ ಜನ ಜಾನುವಾರುಗಳಿಗೆ ಕುಡಿಯಲು ನೀರಿನ ಅಭಾವ ಉಂಟಾಗಿದೆ. ಕಾರಣ ಆಲಮಟ್ಟಿ ಜಲಾಶಯದಿಂದ ಕೆರೆ ತುಂಬುವ ಯೋಜನೆಯಡಿ ದೇವರಹಿಪ್ಪರಗಿ ಸಿಂದಗಿ ತಾಲೂಕಿನ ಕೆರೆಗಳನ್ನು ಈಗಾಗಲೇ ತುಂಬಿಸಲಾಗಿದೆ. ಆದರೆ, ಮುದ್ದೇಬಿಹಾಳ ತಾಲೂಕಿನ ಕೆರೆ ತುಂಬಿಸುವಲ್ಲಿ ಕೆಬಿಜೆಎನ್‌ಎಲ್ ಅಧಿಕಾರಿಗಳು ನಿರ್ಲಕ್ಷ ವಹಿಸುತ್ತಿದ್ದಾರೆ. ಈ ಭಾಗದ ಜನತೆಗೆ ಕುಡಿಯುವ ನೀರಿನ ಅಭಾವ ಹೆಚ್ಚಾಗಿದ್ದು, ತೀವ್ರ ತೊಂದರೆ ಎದುರಿಸಬೇಕಿದೆ. ಈ ಸಂಬಂಧ ಅಧಿಕಾರಿಗಳಿಗೆ ಪ್ರಶ್ನೆ ಮಾಡಿದರೆ ಇಲ್ಲಸಲ್ಲದ ನೆಪ ಹೇಳುತ್ತಿದ್ದಾರೆ. ಇಂಗಳಗೇರಿ ಗ್ರಾಮದ ಕೆರೆಗೆ ಕೂಡಲೇ ನೀರು ಹರಿಸಬೇಕು. ಆಲಮಟ್ಟಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ತಾಲೂಕಿನ ಬಹುತೇಕ ನೀರು ಹರಿಸಿಲ್ಲ. ಇದಕ್ಕೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನೇರ ಹೊಣೆಗಾರರು, ಮುಂದಿನ ಏಳು ದಿನಗಳೊಳಗಾಗಿ ಕೆರೆಗೆ ನೀರು ಹರಿಸದಿದ್ದರೆ ಇಂಗಳಗೇರಿ ಹಾಗೂ ಗುಡ್ನಾಳ ಗ್ರಾಮಸ್ಥರು ನೀರಾವರಿ ಕಚೇರಿಗೆ ಮುತ್ತಿಗೆ ಹಾಕಿ ಅನಿರ್ಧಿಷ್ಠಾವಧಿ ಧರಣಿ ನಡೆಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು. ರಾಜುಗೌಡ ಕರಡ್ಡಿ, ಬಸವರಾಜ ಕುಂಟೋಜಿ, ಸಿದ್ದು ಕಡ್ಡಿ, ಆದಪ್ಪಗೌಡ ಗಬಸಾವಳಗಿ, ಶಿವಣ್ಣ ದೊರನಳ್ಳಿ, ಮಲ್ಲಿಕಾರ್ಜುನ ಗುರಡ್ಡಿ, ಪ್ರಸನ್ನ ಕೋಳೂರ, ರಾಜಶೇಖರ ಹೊಸಮನಿ, ರಾಜಶೇಖರ ಬಿರಾದಾರ, ಶರತ್‌ಗುರಡ್ಡಿ, ಸುನೀಲ ಕರಡ್ಡಿ, ರಾಜು ಬಿರಾದಾರ ಇತರರು ಇದ್ದರು.

ದಲಿತರಷ್ಟೇ ಅಂಬೇಡ್ಕರ್ ಸ್ಮರಿಸಿದರೆ ಸಾಲದು

ಶಾಸಕ ಯಶವಂತರಾಯಗೌಡ ಪಾಟೀಲ | ಬುದ್ಧ ಪೂರ್ಣಿಮೆ, ಡಾ.ಅಂಬೇಡ್ಕರ್ ಜಯಂತಿ

• **ಕನ್ನಡಪ್ರಭ ವಾರ್ತೆ** ಇಂಡಿ



ಪ್ರಪಂಚದಲ್ಲಿ ಭಾರತ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಲು ಡಾ. ಅಂಬೇಡ್ಕರ ಅವರು ನೀಡಿದ ಸಂವಿಧಾನವೇ ಕಾರಣ. ದಲಿತರಷ್ಟೇ ಅಂಬೇಡ್ಕರನ್ನು ಸ್ಮರಿಸುವುದು ಅಲ್ಲ, ದೇಶದ 140 ಕೋಟಿ ಜನ ಸ್ಮರಿಸಬೇಕುಎಂದುಶಾಸಕಯಶವಂತರಾಯಗೌಡ ಪಾಟೀಲ ಹೇಳಿದರು.

ನಗರದ ಅಂಬೇಡ್ಕರ ನಗರದಲ್ಲಿ ಬುದ್ಧ ಪೂರ್ಣಿಮೆ ಹಾಗೂ ಡಾ.ಬಿ.ಆರ್. ಅಂಬೇಡ್ಕರವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿವಿಧ ಜಾತಿ, ಧರ್ಮ, ಸಂಸ್ಕೃತಿ, ಭಾಷೆಯಿಂದ ಕೂಡಿದ ದೇಶವಾಗಿದ್ದರೂ ಇದು ನಮ್ಮ ಭಾರತ ಎಂದು ಗಟ್ಟಿಯಾಗಿ ಹೇಳಲು ಸಂವಿಧಾನವೇ ಕಾರಣ. ಸರ್ವರನ್ನು ಒಗ್ಗೂಡಿಸುವ ಶಕ್ತಿ ಸಂವಿಧಾನಕ್ಕಿದೆ. ಶಿಕ್ಷಣ, ಸಂಸ್ಕಾರ, ಸ್ವಾಭಿಮಾನದಿಂದ ಬದುಕಿದರೆ ಜಯಂತಿ ಆಚರಣೆಗೆ ಅರ್ಥ ಬರುತ್ತದೆ. ಶಿಕ್ಷಣದಿಂದ ಎಲ್ಲವೂ ಬದಲಾವಣೆ ಸಾಧ್ಯ. ಪ್ರಬುದ್ಧ ಭಾರತ ನಿರ್ಮಾಣಕ್ಕೆ ಬುದ್ಧ, ಬಸವ, ಅಂಬೇಡ್ಕರವರ ಚಿಂತನೆಗಳು ಅಗತ್ಯ ಎಂದರು.

ಪ್ರಾಧ್ಯಾಪಕಡಾ.ಅಪ್ಪಗೆರೆಸೋಮಶೇಖರ ಮಾತನಾಡಿ, ಡಾ.ಅಂಬೇಡ್ಕರ ದೇಶದ ಎಲ್ಲಾ ಜನರ ಹಿತಕ್ಕಾಗಿ ದುಡಿದವರು. ಕಾರ್ಮಿಕರು, ರೈತರು, ಮಹಿಳೆಯರ ಪ್ರಗತಿಗಾಗಿ ಹೋರಾಡಿದವರು. ಕಾರ್ಮಿಕರ ದುಡಿಮೆ ಅವಧಿಯನ್ನು 8 ಗಂಟೆಗೆ ನಿಗದಿ ಮಾಡಿ ಕಾನೂನು ರೂಪಿಸಿದವರು. ತಮ್ಮ ಅರ್ಥಶಾಸ್ತ್ರದ ಮೂಲಕ ರಿಸರ್ವ ಬ್ಯಾಂಕ್ ಆಫ್ ಇಂಡಿಯಾ ಸ್ಥಾಪನೆಗೆ ಕಾರಣರಾದವರು. ಬಾಕ್ರಾನಾಂಗಲ್ ದಾಮೋದರ ಆಣೆಕಟ್ಟು ಯೋಜನೆ ರೂಪಿಸಿದವರು ಎಂದರು.

ಬುದ್ದ ವಿಹಾರ ಸಿಂದಗಿಯ ಸಂಘಪಾಲ ಬಂತೇಜಿ ಮಾತನಾಡಿ, ಅಂಬೇಡ್ಕರ ಜಯಂತಿ ಆಚರಣೆಗಳಾಗುತ್ತಿವೆ, ಅನುಸರಣೆಗಳಾಗಬೇಕು, ಅಂಬೇಡ್ಕರ ಬದುಕಿದ್ದಾಗಲೂ ಅವರನ್ನು ಅವಮಾನಿಸಲಾಗಿದೆ. ಸತ್ತ ನಂತರವೂ ಅವಮಾನಿಸಲಾಗುತ್ತಿದೆ. ದಲಿತೇತರ ಸಮುದಾಯಗಳು ಅಂಬೇಡ್ಕರರ ಸಾಧನೆ ಅರ್ಥ ಮಾಡಿಕೊಳ್ಳುವಲ್ಲಿ ಸೋತಿವೆ ಎಂದರು.

ವಿಕಾಸ ಹೊಸಮನಿ, ಪ್ರೊ.ಎಸ್.ಜೆ. ಮಾಡ್ಯಾಳ, ಪ್ರಶಾಂತ ಕಾಳೆ, ಸಾಧ್ವಿ ಬಸವರಾಜ ಮಾಶ್ಯಾಳ ಮಾತನಾಡಿದರು. ಬಿ.ಡಿ.ಪಾಟೀಲ, ಡಿವೈಎಸ್ಪಿ ಸದಾಶಿವ ಕಟ್ಟಿಮನಿ, ಜಾವೀದ ಮೋಮಿನ, ಸತ್ತಾರ ಬಾಗವಾನ, ಅಯೂಬ ನಾಟಿಕಾರ, ಶಿವು ಬಗಲಿ, ಮಲ್ಲಪ್ಪ ಕಾಲೇಭಾಗ, ಭೀಮಾಶಂಕರ ಮೂರಮನ, ಬುದ್ದವ್ವ ಕಾಳೆ, ಮಿಲಿಂದ ಹೊಸಮನಿ, ಮೋಹನ ಕಾಳೆ, ಭೀಮಣ್ಣ ಕೌಲಗಿ, ಜಟ್ಟೆಪ್ಪ ರವಳಿ, ಅಜೀತ ಧನಶೆಟ್ಟಿ, ಚಂದ್ರಶೇಖರ ಕಾಲೇಬಾಗ, ಚಿದಾನಂದ ಕಾಂಬಳೆ ಇತರರು ಇದ್ದರು. ಇದೇ ಸಂದರ್ಭದಲ್ಲಿ ಸುಜಿತ ಕಾಳೆ ಸಂಗ್ರಹಿಸಿದ ದೇಣಿಗೆ ಪೆಟ್ಟಿಗೆಯನ್ನು ಬಂತೇಜಿಯವರಿಗೆ, ಮತ್ತೊಂದು ಸಂಘಟಕರರಿಗೆ ನೀಡಲಾಯಿತು.

ಜನ್ಮ ಶತಮಾನೋತ್ಸವ... | ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ | ಲಿಂ.ಶಿವಬಸವ ಶಿವಾಚಾರ್ಯ ಸ್ವಾಮೀಜಿ ಜನ್ಮ ಶತಮಾನೋತ್ಸವ

ಸಮಾಜದಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡರೆ ಜೀವನ ಪಾವನ

• **ಕನ್ನಡಪ್ರಭ ವಾರ್ತೆ** ಬಸವನಬಾಗೇವಾಡಿ

ಪ್ರತಿಯೊಬ್ಬರೂ ಪರಮಾತ್ಮನ ಅಂಶ. ಪ್ರತಿಯೊಬ್ಬರಲ್ಲಿ ಅಗಾಧ ಶಕ್ತಿಯಿರುತ್ತದೆ. ಈ ಶಕ್ತಿಯನ್ನು ಸದುಪಯೋಗ ಪಡಿಸಿಕೊಂಡರೆ ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಇಂಗಳೇಶ್ವರದ ಬಸ್ ನಿಲ್ದಾಣದ ಬಸವೇಶ್ವರ ವೃತ್ತದ ಆವರಣದಲ್ಲಿ ಹಿರೇಮಠದ ಲಿಂ.ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರ ಜನ್ಮ ಶತಮಾನೋತ್ಸವ ನಿಮಿತ್ತ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಧರ್ಮಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ಇಲ್ಲಿನ ಹಿರೇಮಠದ ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರು ಅಪಾರ ತಪಸ್ಸು ಶಕ್ತಿ ಹೊಂದಿದ್ದರು. ಇವರು ಭೌತಿಕವಾಗಿ ಇರದೇ ಇದ್ದರೂ ಅವರ ತಪಸ್ಸು ಶಕ್ತಿ, ಕೀರ್ತಿ ಅಮರವಾಗಿರುತ್ತದೆ. ಇವರ ಶಿಷ್ಯರಾದ ಡಾ.



ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಇವರ ತಪೋಬಲದಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ಬೆಂಗಳೂರಿನ ವಿಭೂತಿಪುರ ಮಠದಿಂದ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಉತ್ತರ ಭಾರತದಲ್ಲಿಯೂ ಬಡವರು, ಆರ್ಥಿಕವಾಗಿ ಹಿಂದುಳಿದವರು ಇರುವುದನ್ನು ಗಮನಿಸಿದ ಇವರು ಆಯೋಧ್ಯೆಯಲ್ಲಿಯೂ ಶಿಕ್ಷಣ ಸಂಸ್ಥೆಯನ್ನು ಆರಂಭಿಸುವ ಆಲೋಚನೆಯಲ್ಲಿದ್ದಾರೆ ಎಂಬುವುದು ತಿಳಿದುಬಂದಿದೆ. ಬಹುಜನ ಹಿತ ಬಯಸುವವರಿಗೆ ಯಾವಾಗಲೂ ನೆರವು ಸಿಗುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಸ್ಥಳೀಯ ಹಿರೇಮಠದ ಬೃಂಗೀಶರಲಿಂಗ ಸ್ವಾಮೀಜಿಯವರು ಸಹ ಅಪಾರ ಶಕ್ತಿ ಹೊಂದಿದ್ದಾರೆ. ಇವರು ಜನರಿಗೆ ನೀರು ತೋರಿಸಿ ನೆರವಾಗುವ ಶಕ್ತಿ ಹೊಂದಿದ್ದಾರೆ ಎಂದರು.

ಜೆಡಿಎಸ್ ರಾಜ್ಯ ಹಿರಿಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿ, ಇಂಗಳೇಶ್ವರ ಪುಣ್ಯವಂತರ ನಾಡು. ಇಲ್ಲಿ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತವೆ. ಧರ್ಮ ಮಾರ್ಗದಲ್ಲಿ ನಡೆಯುವವರಿಗೆ ಯಾವಾಗಲೂ ಒಳ್ಳೆಯದು ಆಗುತ್ತದೆ. ಇದಕ್ಕೆ ನಾಡಿನ ಶ್ರೀಗಳ ಆಶೀರ್ವಾದ ಇದೆ. ಎಲ್ಲರೊಂದಿಗೆನಗುತ್ತಾ, ಪ್ರೀತಿ-ವಿಶ್ವಾಸದಿಂದ ಇದ್ದರೆ ಅದು ನಮಗೂ ಸಿಗಲು ಸಾಧ್ಯ. ಇದನ್ನು ಅರಿತುಕೊಂಡು ಜೀವಿಸಬೇಕಿದೆ. ಕೋವಿಡ್ ಮಹಾಮಾರಿಯಲ್ಲಿ ಗುರುಗಳ ಕೃಪೆಯಿಂದ ಅನೇಕರು ಬದುಕಿ ಉಳಿದರು. ಮನುಷ್ಯ ಸತ್ತರೂ ಅವನು ಜೀವಂತವಿದ್ದಾಗ ಮಾಡಿದ ಒಳ್ಳೆಯ ಕಾರ್ಯಗಳು ಮಾತ್ರ ಶಾಶ್ವತವಾಗಿ ಇರುತ್ತವೆ ಎಂದರು.

ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ಪುಣ್ಯ ಭೂಮಿಯಲ್ಲಿ ದಿವ್ಯ ಶಕ್ತಿಯಿದೆ. ಜಾತ್ಯತೀತರಾಗಿ ಬದುಕಿದ ಬಸವೇಶ್ವರರಂತೆ ಲಿಂ.ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರು ಬದುಕಿದರು. ಭಕ್ತರ ಕಷ್ಟವನ್ನು ಹರಣ ಮಾಡಿದರು. ತ್ರಿಕಾಲ ಜ್ಞಾನಿಗಳಾಗಿದ್ದರು. ಇಂತಹ ಶ್ರೀಗಳ ಜನ್ಮ ಶತಮಾನೋತ್ಸವದಲ್ಲಿ ಎಲ್ಲರೂ ಭಾಗಿಯಾಗುತ್ತಿರುವುದು ಸುದೈವ ಎಂದರು.

ಕೆರೂರಿನಡಾ.ಶಿವಕುಮಾರಶಿವಾಚಾರ್ಯ ಸ್ವಾಮೀಜಿ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿದರು.

ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮೀಜಿ, ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಚಂದ್ರಶೇಖರಗೌಡ ಪಾಟೀಲ ಗುರನಗೌಡ ಬೇವೂರ ಇತರರು ಇದ್ದರು. ಪಿ.ಎಸ್.ಬಾಗೇವಾಡಿ ಸ್ವಾಗತಿಸಿದರು. ಬಸವರಾಜ ಬಾಗೇವಾಡಿ ನಿರೂಪಿಸಿದರು. ಕೆ.ಎಸ್.ಬಾಗೇವಾಡಿ ವಂದಿಸಿದರು. ಇದೇ ಸಂದರ್ಭದಲ್ಲಿ ಕಾಶಿ ಜಗದ್ಗುರುಗಳ ತುಲಾಭಾರ ನೆರವೇರಿತು. ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ವೃತ್ತದಿಂ ಶ್ರೀಮಠದವರೆಗೂ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವು ಕುಂಭಮೇಳ, ವಿವಿಧ ವಾದ್ಯವೈಭವದೊಂದಿಗೆ ಜರುಗಿತು.

ಪತ್ರಿಕಾ ಭವನ ಮಂಜೂರಾತಿಗೆ ಆಗ್ರಹ: ಶಾಸಕ, ಸಚಿವರಿಗೆ ಮನವಿ

• **ಕನ್ನಡಪ್ರಭ ವಾರ್ತೆ** ದೇವರಹಿಪ್ಪರಗಿ

ತಾಲೂಕು ಕೇಂದ್ರ ದೇವರ ಹಿಪ್ಪರಗಿ ಪಟ್ಟಣದಲ್ಲಿ ನೂತನವಾಗಿ ಪತ್ರಿಕಾ ಭವನ ನಿರ್ಮಾಣಕ್ಕೆ ನಿವೇಶನ ಹಾಗೂ ಅಗತ್ಯ ಅನುದಾನ ದೊರಕಿಸಬೇಕು ಎಂದು ಆಗ್ರಹಿಸಿ ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಸಚಿವ



ಎಂ.ಬಿ.ಪಾಟೀಲ ಹಾಗೂ ಶಾಸಕ ರಾಜುಗೌಡ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು. ಸಂಘದ ತಾಲೂಕು ಅಧ್ಯಕ್ಷ ಸಂಗಮೇಶ ಉತ್ನಾಳ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿದ ಪತ್ರಕರ್ತರಿಗೆ ಕುಡಲೇ ಸ್ಪಂದಿಸಿದ ಸಚಿವರು, ಸ್ಥಳದಲ್ಲಿ ಉಪಸ್ಥಿತರಿದ್ದ ಪಪಂ ಮುಖ್ಯಾಧಿಕಾರಿ ಅಪ್ರೋಜ್ ಅಹ್ಮದ್ ಪಟೇಲ ಅವರನ್ನು ಕರೆದು ಪತ್ರಕರ್ತರ ಮನವಿಗೆ ಶೀಘ್ರವಾಗಿ ನಿವೇಶನ ದೊರಕಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. ಕಾನಿಪ ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಾನಂದ ಕುಂಬಾರ, ಉಪಾಧ್ಯಕ್ಷರಾದ ಶ್ರೀಧರ ನಾಡಗೌಡ, ಮಂಜುನಾಥ ಬ್ಯಾಕೋಡ, ಖಜಾಂಚಿ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಕಾರ್ಯದರ್ಶಿಗಳಾದ ಹುಸೇನ ಕೊಕಟನೂರ, ಈರನಗೌಡ ಪಾಟೀಲ, ಮಳೆಪ್ಪಗೌಡ ಬಿರಾದಾರ, ಅಶೋಕ ಗೊಲ್ಲರ, ಅಹ್ಮದ್ ಅಲಿ ಮುಲ್ಲಾ, ಸಾಯಿಬಣ್ಣ ಹಳ್ಳಿ ಹಾಗೂ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

ಮುದ್ದೇಬಿಹಾಳ ತಾಲೂಕಿನ ದೇವೂರ ಜಾಕ್ ವೆಲ್ ನಿಂದ ಮುದ್ದೇಬಿಹಾಳ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಕೋರ್ಲೂರ ಕ್ರಾಸ್ ಹತ್ತಿರ. ಮುಖ್ಯ ಪೈಪ್ ಲೈನ್ ಕಟ್ ಆಗಿದ್ದ ಕಾರಣ ಮೇ 4ರಂದು ಒಂದು ದಿನ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ವ್ಯತ್ಯವಾಗುತ್ತಿದ್ದು ಕಾರಣ ಪಟ್ಟಣದ ಎಲ್ಲಾ ಸಾರ್ವಜನಿಕರು ಸಹಕರಿಸಬೇಕು.
• **ಮಲ್ಲನಗೌಡ ಬಿರಾದಾರ,** ಮುಖ್ಯಾಧಿಕಾರಿ ಪುರಸಭೆ ಮುದ್ದೇಬಿಹಾಳ

ಸುದ್ದಿ ಸಿಂಚನ

ಅರ್ಜಿ ಆಹ್ವಾನ

ಸಿಂದಗಿ: ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ ವಿಜಯಪುರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ನಗರದ ಆರ್.ಡಿ.ಪಾಟೀಲ ಪಪೂ ಕಾಲೇಜಿನ ಎದುರುಗಡೆ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ 2026-27ನೇ ಸಾಲಿಗೆ ಮೆಟ್ರಿಕ್ ನಂತರದ ಯಾವುದೇ ತರಗತಿಯಲ್ಲಿ ಓದುತ್ತಿರುವ ಗ್ರಾಮೀಣ ಬಾಲಕಿಯರಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿನಿಯರು ಹಿಂದಿನ ಉತ್ತೀರ್ಣರಾದ ಅಂಕಪಟ್ಟಿ ವರ್ಗಾವಣೆ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸ ಮಾಡುವ ಅಂತರದ ಪ್ರಮಾಣ ಪತ್ರ, ಆಧಾರ ಕಾರ್ಡ್, ಬಿಪಿಎಲ್ ಕಾರ್ಡ್ ಫೋಟೋ ಪ್ರತಿಯೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.15ಕೊನೆಯ ದಿನ. ಮಾಹಿತಿಗಾಗಿ ಮೊ. 9741567545, 94487 52781 ಸಂಪರ್ಕಿಸೆಂದು ಸಂಸ್ಥೆ ಅಧ್ಯಕ್ಷ ಕೆ.ಎನ್.ಮೇಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸ್ತಿ ತೆರಿಗೆಗೆ ಶೇ.5ರಷ್ಟು ರಿಯಾಯಿತಿ

ತಾಳಿಕೋಟೆ: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿಗಳ ಮಾಲಿಕರಿಗೆ ಏಪ್ರಿಲ್ 30ರೊಳಗೆ ಸ್ವಯಂಘೋಷಿತ ಆಸ್ತಿ ತೆರಿಗೆ ಭರಿಸಿದರೆ ಪುರಸಭೆ ಯಿಂದ ಶೇ.5ರಷ್ಟು ರಿಯಾಯಿತಿ ಸೌಲಭ್ಯ ನೀಡುವುದನ್ನು ಮೇ.30 ರವರೆಗೆ ವಿಸ್ತರಿಸಲಾಗಿದೆ ಎಂದು ಮುಖ್ಯಾಧಿಕಾರಿ ವಸಂತ ಪವಾರ ತಿಳಿಸಿದ್ದಾರೆ.2026-27ನೇ ಸಾಲಿನ ವರ್ಷಾರಂಭವಾಗಿದ್ದು, ಆಸ್ತಿ ತೆರಿಗೆ ಮಾಲೀಕರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಈ ರಿಯಾಯಿತಿ ನೀಡಲಾಗಿದ್ದು, ಜೂಲೈ 1 ರಿಂದ ಆಸ್ತಿ ತೆರಿಗೆ ತುಂಬಿದಲ್ಲಿ ಶೇ.100ಕ್ಕೆ ಒಂದು ತಿಂ ಗಳಿಗೆ ₹ 2 ದಂತೆ ಬಡ್ಡಿ ಆಕರಿಸಲಾಗುವುದು. ಒಂದು ವೇಳೆ ತಪ್ಪು ಮಾಹಿತಿ ನೀಡಿ ಕಂದಾಯ ತುಂಬಿದ್ದು ಕಂಡು ಬಂದಲ್ಲಿ ಮರು ಲೆಕ್ಕಾಚಾರ ಮಾಡಿ ನೋಡಿದರೆ ಈ ಹಿಂದೆ ತುಂಬಿದ ಹಣ ಹೊರತುಪಡಿಸಿ ಉಳಿದ ಮೊತ್ತದ 2 ಪಟ್ಟು ಕಂದಾಯ ವಸೂಲಿಗೆ ಪುರಸಭೆ ಕಾಯ್ದೆ 64ರಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. ಕಾರಣ ಸಾರ್ವಜನಿಕರು ಸ್ವಯಂ ಘೋಷಿತ ಆಸ್ತಿ ತೆರಿಗೆ ತುಂಬಲು ಪುರಸಭೆ ವತಿಯಿಂದ ನೀಡಲಾಗಿರುವ ರಿಯಾಯಿತಿ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದು ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಅವರು ತಿಳಿಸಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ

ಇಂಡಿ: ನಗರದ ಹಡಪದ ಅಪ್ಪಣ್ಣ ವಿವಿಧ ಉದ್ದೇಶಗಳ ಸಹಕಾರಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ






ಯಲ್ಲಿ ಅಧ್ಯಕ್ಷಯಾಗಿ ಸಿದ್ದು ನಾವಿ, ಉಪಾಧ್ಯಕ್ಷರಾಗಿ ಶಿವಾನಂದ ನಾವಿ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬೊಬ್ಬರೆ ನಾಮಪತ್ರ ಸಲ್ಲಿಸಿದ್ದರಿಂದ ಇಬ್ಬರು ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ ಸದ್ದಲಗಿ ಘೋಷಿಸಿದರು. ನಿರ್ದೇಶಕರಾದ ಸಂತೋಷ ಗವಳಿ, ನಟರಾಜ ಗವಳಿ, ಅಶೋಕ ಹಡಪದ, ಬಸವರಾಜ ನಾವಿ,ದೂಳಪ್ಪ ನಾವಿ, ನಾನು ರಾಠೋಡ, ಶಕುಂತಲಾ ನಾವಿ ಹಾಗೂ ಕಾರ್ಯದರ್ಶಿ ಸಿದ್ದರಾಯ ಅಪ್ತಾಗಿರಿ ಹಾಗೂ ಎಲ್ಲಾ ನಿರ್ದೇಶಕರು ಹಾಜರಿದ್ದರು.

ಪ್ರಿಯಾಂಕ ಬನ್ಸೋಡೆಗೆ ಪಿಎಚ್‌ಡಿ ಪದವಿ ಪ್ರದಾನ

ವಿಜಯಪುರ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರವು ಪ್ರವಾಸೋದ್ಯಮ ಮತ್ತು



ಆತಿಥ್ಯ (Tourism and Hospitality) ವಿಷಯದಲ್ಲಿ ಮಾಡಿದ ಸಂಶೋಧನೆಗಾಗಿ ಪ್ರಿಯಾಂಕ ಬನ್ಸೋಡೆ ಅವರಿಗೆ ಡಾಕ್ಟರ್‌ಆಫ್ ಫಿಲಾಸಫಿ ಪದವಿಯನ್ನು ಪ್ರದಾನ ಮಾಡಿದೆ. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಸ್.ಬಿ. ಕಾಮಶೆಟ್ಟಿ ಅವರು ಅವರ ಮಾರ್ಗದರ್ಶಕರಾಗಿದ್ದರು. ಇದರ ಜೊತೆಗೆ, ಅವರು KSET 2025 ಪರೀಕ್ಷೆಯನ್ನು ಉತ್ತೀರ್ಣರಾಗಿದ್ದು, Res earch Methodology, Ethics and Philosophy ಎಂಬ ಶೈಕ್ಷಣಿಕ ಕೃತಿಯನ್ನು ರಚಿಸಿ ಸಂಶೋಧನೆ ಮತ್ತು ಅಕಾಡೆಮಿಕ್ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಅತ್ಯುತ್ತಮ ಸೇವೆ ಗಮನಿಸಿ ಅವರಿಗೆ ರಾಷ್ಟ್ರೀಯ ಮಟ್ಟದ 'ಬೆಸ್ಟ್ ಟೀಚರ್‌ಅವಾರ್ಡ್' ಪ್ರಶಸ್ತಿಯೂ

ಮೇ 9ಕ್ಕೆ ಯಡಿಯೂರಪ್ಪ ಅಭಿಮಾನೋತ್ಸವ

ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ | ಚಿತ್ರದುರ್ಗದಲ್ಲಿ 20 ಲಕ್ಷ ಜನ ಸೇರುವ ನಿರೀಕ್ಷೆ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ರೈತ ನಾಯಕ ಬಿ.ಎಸ್.ಯಡಿಯೂರಪ್ಪನವರು ರಾಜಕೀಯ ಜೀವನದಲ್ಲಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೇ 9ರಂದು ಬೆಳಗ್ಗೆ11ಗಂಟೆಗೆ ಚಿತ್ರದುರ್ಗದಲ್ಲಿರಾಜ್ಯಮಟ್ಟದಬೃಹತ್ ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾವೇಶಕ್ಕೆ ರಾಜ್ಯದಾದ್ಯಂತ 15 ರಿಂದ 20 ಲಕ್ಷ ಅಭಿಮಾನಿಗಳು ಸೇರುವ ನಿರೀಕ್ಷೆಯಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

ಭಾನುವಾರ ಸಂಜೆ ಪಟ್ಟಣದ ತಮ್ಮ ದಾಸೋಹ ನಿಲಯದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರು ಪುರಸಭೆ ಅಧ್ಯಕ್ಷರಾಗಿ, ಶಾಸಕರಾಗಿ, ಮುಖ್ಯಮಂತ್ರಿಯಾಗಿ ಸುಧೀರ್ಘ ಕಾಲ ಜನಸೇವೆ ಮಾಡಿದ್ದಾರೆ. ರೈತರಿಗೆ ಬೆಲೆ ಸಿಗದಿದ್ದಾಗ ಏಕಾಂಗಿಯಾಗಿ ಹೋರಾಡಿ ಪಾದಯಾತ್ರೆ ಮೂಲಕ ವಿಧಾನಸೌಧಕ್ಕೆ ರೈತರ ಧ್ವನಿ ತಲುಪಿಸಿದ ಮಹಾನ್ ನಾಯಕರು. ಇಂತಹ ನಾಯಕನ ಗೌರವಾರ್ಥವಾಗಿ ಎಲ್ಲಾ ಮಠಾಧೀಶರು ಹಾಗೂ ಪಕ್ಷಾತೀತವಾಗಿ ಅಭಿಮಾನಿಗಳು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.



ಯಡಿಯೂರಪ್ಪನವರ ಮುಖ್ಯಮಂತ್ರಿ ಅವಧಿಯಲ್ಲಿ ಭಾಗ್ಯಲಕ್ಷ್ಮಿ ಬಾಂಡ್, ಶೂನ್ಯ ಬಡ್ಡಿ ದರದಲ್ಲಿ ಸಾಲ, ನೇಕಾರರಿಗೆ ವಿದ್ಯುತ್ ಸಬ್ಸಿಡಿ ಹಾಗೂ ವಿಜಯಪುರ ಜಿಲ್ಲೆಯ 124 ಕೆರೆ ತುಂಬಿಸುವ ಯೋಜನೆ ಮತ್ತು ಚಿಮ್ಮಲಗಿ ಏತನೀರಾವರಿ ಯೋಜನೆಗಳಿಗೆ ಸಾವಿರಾರು ಕೋಟಿ ಅನುದಾನ ನೀಡಲಾಗಿದೆ. ಮುದ್ದೇಬಿಹಾಳ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯ ಜನರು ಈ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ. ನನಗೆ ಬಿಜೆಪಿ ಟಿಕೆಟ್ ನೀಡಿ, ನಿಗಮದ ಅಧ್ಯಕ್ಷರನ್ನಾಗಿ ಮಾಡಿ ಬೆಳೆಸಿದ ಯಡಿಯೂರಪ್ಪನವರನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದು ಕೃತಜ್ಞತೆ ಸಲ್ಲಿಸಿದರು.

ಬಿಜೆಪಿ ಹಿರಿಯ ಮುಖಂಡರಾದ ಪ್ರಭು ಕಡಿ, ಎಂ.ಎಸ್.ಪಾಟೀಲ, ಮಲಕೇಂದ್ರಗೌಡ ಪಾಟೀಲ, ಕೆಂಚಪ್ಪ ಬಿರಾದಾರ, ಚನ್ನಬಸಪ್ಪ ಚೆನ್ನಿಗಾವಿಶೆಟ್ಟಿ, ಮಲ್ಲಯ್ಯ ಬಿರಾದಾರ, ಗಿರೀಶಗೌಡ ಪಾಟೀಲ, ಮದನಸ್ವಾಮಿ ಹಿರೇಮಠ, ಮುತ್ತುಣ್ಣ ಹುಗಿ, ಪ್ರೇಮಸಿಂಗ್ ರಾಠೋಡ, ಸೋಮಗೌಡ ಬಿರಾದಾರ, ಮಹಾಂತಗೌಡ ಗಂಗನಗೌಡರ, ವೀರೇಶ ಪಾಟೀಲ, ಎಸ್.ಎಸ್.ಶಿವಣಗಿ, ಸಿದ್ದರಾಜ ಹೊಳಿ, ಸಂಗನಗೌಡ ಪಾಟೀಲ, ಸಂಗಮ್ಮ ದೇವರಳ್ಳಿ, ಗೌರಮ್ಮ ಹುನಗುಂದ, ರೇಖಾ ಕೊಂಡಗೂಳಿ, ಪ್ರೀತಿ ಕಂಬಾರ, ಅನಿಲ ನಾಯಕ ಸೇರಿ ಅನೇಕರು ಉಪಸ್ಥಿತರಿದ್ದರು.

> ಯಡಿಯೂರಪ್ಪನವರ ಕಾರ್ಯವೈಖರಿ ಮತ್ತು ಹೋರಾಟದ ಬದುಕನ್ನು ಸ್ವತಃ ಸಿದ್ದರಾಮಯ್ಯನವರೇ ಹೊಗಳಿದ್ದಾರೆ. ಸದನದಲ್ಲಿ ಹಾಗೂ ಸಾರ್ವಜನಿಕವಾಗಿ ಯಡಿಯೂರಪ್ಪನವರ ಸಂಘಟನಾ ಶಕ್ತಿಯನ್ನು ಸಿದ್ದರಾಮಯ್ಯನವರು ಶ್ಲಾಘಿಸಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಕರ್ನಾಟಕದಲ್ಲಿ ಹಜ್ ಭವನ ನಿರ್ಮಿಸುವ ಮೂಲಕ ಸರ್ವಧರ್ಮೀಯರನ್ನು ಸಮಾನವಾಗಿ ಕಂಡಿದ್ದನ್ನು ವಿರೋಧ ಪಕ್ಷದ ನಾಯಕರೂ ಮೆಚ್ಚಿಕೊಂಡಿದ್ದಾರೆ.
> • **ಎ.ಎಸ್.ಪಾಟೀಲ ನಡಹಳ್ಳಿ,** ಮಾಜಿ ಶಾಸಕ

8ಕ್ಕೆ ವಿಜಯಪುರದಲ್ಲಿ ಬೃಹತ್ ರೈತ ಸಮಾವೇಶ

ದೇವರಹಿಪ್ಪರಗಿ, ಬಸವನ ಬಾಗೇವಾಡಿ, ಮುದ್ದೇಬಿಹಾಳದಲ್ಲಿ ಸಭೆ | ಲಕ್ಷ ರೈತರು ಸೇರುವ ನಿರೀಕ್ಷೆ

• **ಕನ್ನಡಪ್ರಭ ವಾರ್ತೆ** ಬಸವನಬಾಗೇವಾಡಿ

ಜಿಲ್ಲೆಯ ಜ್ವಲಂತ ಸಮಸ್ಯೆಗಳು ಸೇರಿದಂತೆ ರೈತರು ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮೇ.8ರಂದು ವಿಜಯಪುರದ ದರಬಾರ ಮೈದಾನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯು ರಾಜ್ಯಮಟ್ಟದ 4ನೇ ಬೃಹತ್ ರೈತ ಜಾಗೃತಿ ಸಮಾವೇಶ ಹಮ್ಮಿಕೊಂಡಿದೆ ಎಂದು ರಾಜ್ಯಾಧ್ಯಕ್ಷ ಚೂನಪ್ಪಾ ಪೂಜೇರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮ ಸಂಘವು ರೈತರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಪ್ರಾಮಾಣಿಕವಾಗಿ ಹೋರಾಟ ಸೇರಿದಂತೆ ಸರ್ಕಾರದ ಗಮನ ಸೆಳೆಯುವ ಕಾರ್ಯ ನಿರ್ವಹಿಸುತ್ತಿದೆ. ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವುದು, ಕಬ್ಬು ಬೆಳೆಗಾರರಿಗೆ ಸರಿಯಾದ ಬೆಲೆ ಸಿಗದೇ ಅವರು ಕಷ್ಟ ಅನುಭವಿಸುವಂತಾಗಿದೆ. ಕಬ್ಬಿಗೆ ₹ 5,500 ಕನಿಷ್ಠ ದರ ನಿಗದಿಪಡಿಸಬೇಕು. ಈರುಳ್ಳಿ ಬೆಳೆಗಾರರು ಬೆಲೆ ಕುಸಿತದಿಂದಾಗಿ ಬೀದಿಗೆ ಬಂದಿದ್ದಾರೆ. ಡಿಸಿಸಿ ಬ್ಯಾಂಕಿನಿಂದ ಪ್ರತಿಯೊಬ್ಬ ರೈತನಿಗೆ ಶೂನ್ಯ ಬಡ್ಡಿ ದರದಲ್ಲಿ ₹ 1 ಲಕ್ಷ ಸಾಲ ನೀಡಬೇಕು. ನೀರಾವರಿ ಸೇರಿ ಕೃಷಿ ಕ್ಷೇತ್ರವನ್ನು ಖಾಸಗೀಕರಣ ಮಾಡಬಾರದು. ರೈತರು ಇಂದು ಆತಂಕದಲ್ಲಿದ್ದಾರೆ. ರೈತರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ನಾವು ಬೃಹತ್ ಸಮಾವೇಶ ಹಮ್ಮಿಕೊಂಡಿದ್ದೇವೆ ಎಂದರು. ಸಮಾವೇಶಕ್ಕೆ ಮುಗಳಖೋಡದ ಡಾ.ಮುರುಘೇರಾಜೇಂದ್ರ ಸ್ವಾಮೀಜಿ, ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯರು, ಶಿರಶ್ಯಾಡದಅಭಿನವಮುರುಘೇಂದ್ರಶಿವಾಚಾರ್ಯರು, ಗೋಕಾಕದ ಸುವರ್ಣಾತಾಯಿ ಹೊಸಮಠ, ಮಹಾಲಿಂಗಪುರದ ಯಾಸೀನ ಮುಲ್ಲಾ ಗುರುಗಳು ಸೇರಿ ಅನೇಕ ಶ್ರೀಗಳು, ಮುಖಂಡರು, ಅಧಿಕಾರಿಗಳು ಆಗಮಿಸುತ್ತಾರೆ.



• **ಕನ್ನಡಪ್ರಭ ವಾರ್ತೆ** ವಿಜಯಪುರ

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ರಾಜ್ಯಮಟ್ಟದ 4ನೇ ಬೃಹತ್ ರೈತ ಜಾಗೃತಿ ಸಮಾವೇಶ ಮೇ 8ರಂದು ಬೆಳಗ್ಗೆ 10ಕ್ಕೆ ನಗರದ ದರಬಾರ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಕುಬಕಡ್ಡಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಕಾರ್ಯಕ್ರಮದಲ್ಲಿ ಸುಕ್ಷೇತ್ರ ಮುಗಳಖೋಡ, ಜಿಡಗಾದ ಷಡಕ್ಷರಿ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಶಿರಶ್ಯಾಡದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಹಾಗೂ ವಿವಿಧ ಮಠಾಧಿಶರು ಸಾನ್ನಿಧ್ಯ ವಹಿಸಲಿದ್ದಾರೆ. ರಾಜ್ಯಾಧ್ಯಕ್ಷ ಚುನಪ್ಪಾ ಪೂಜೇರಿ ಅಧ್ಯಕ್ಷತೆ, ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ನೇತೃತ್ವ ವಹಿಸಲಿದ್ದು, ನಾಡಿನ ಸಾವಿರಾರು ರೈತ ಮುಖಂಡರು ಹಾಗೂ ರೈತರೊಡಗೂಡಿ ಈ ಕಾರ್ಯಕ್ರಮ ಜರುಗಲಿದೆ. ಜಿಲ್ಲಾಧಿಕಾರಿ ಡಾ. ಆನಂದ.ಕೆ, ಎಸ್ಪಿ ಲಕ್ಷ್ಮಣ ನಿಂಬರಗಿ, ಜಿಪಂ ಸಿಇಒ ರಿಷಿ ಆನಂದ ಸಮಾವೇಶ ಉದ್ಘಾಟಿಸುವರು. ಕೃಷಿ ಇಲಾಖೆ ಜಂಟಿನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕಾ ಇಲಾಖೆ ಜಂಟಿನಿರ್ದೇಶಕ ರಾಹಲ ಕುಮಾರ ಭಾವಿದೊಡ್ಡಿ, ಆಹಾರ ಇಲಾಖೆ ಡಿಡಿ ವಿನಯ ಕುಮಾರ ಪಾಟೀಲ ಭಾಗವಹಿಸಲಿದ್ದಾರೆ ಎಂದರು.

ರಾಜ್ಯ ಉಪಾಧ್ಯಕ್ಷ ಕಲ್ಲುಸೊನ್ನದ ಮಾತನಾಡಿದರು. ರೈತ ಸಂಘದ ರಾಜ್ಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ, ರಾಜ್ಯ ಉಪಾಧ್ಯಕ್ಷರಾದ ಕಲ್ಲು ಸೊನ್ನದ, ಶಾಂತಗೌಡ ಪಾಟೀಲ ಹಾಗೂ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹಾಗೂ ಜಿಲ್ಲಾ ಸಮಿತಿ, 13 ತಾಲೂಕು ಸಮಿತಿ, ಸಮಸ್ತ ಹೋಬಳಿ ಹಾಗೂ ಪ್ರತಿ ಗ್ರಾಮ ಮಟ್ಟದ ಸರ್ವ ಪದಾಧಿಕಾರಿಗಳು ಪತ್ರಿಕೆ ಮೂಲಕ ಮನವಿ ಮಾಡಿಕೊಂಡರು.

ಪದಾಧಿಕಾರಿಗಳಾದ ರಾಮನಗೌಡ ಪಾಟೀಲ, ದಯಾನಂದ ಕೊಳ್ಳಿ, ಮಹಾದೇವ ಬನಸೋಡೆ, ಶ್ರೀಶೈಲ ವಾಲಿಕಾರ, ವಸಂತ ಭೈರಾಮಡಿ, ಸಂಗಪ್ಪ ಟಕ್ಕೆ, ಶಾನೂರ ನಂದರಗಿ, ಫೇನಪ್ಪ ಬಿರಾದಾರ, ಅಭಿಷೇಕ ಹೂಗಾರ, ಸೋಯೆಬ್ ತಿಕೋಟಿ ಇದ್ದರು.

ಸಮಾವೇಶ ಯಶಸ್ವಿಗೊಳಿಸಿ: ಚೂನಪ್ಪಾ ಪೂಜೇರಿ ಕರೆ


ಲಕ್ಷ ರೈತರು ಪಾಲ್ಗೊಳ್ಳುವ ನಿರೀಕ್ಷೆ | ಶಾಂತಗೌಡ ಪಾಟೀಲ ನಡಹಳ್ಳಿ ಹೇಳಿಕೆ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ದೇಶದ ಬೆನ್ನೆಲುಬಾದ ರೈತ ಇಂದು ಸಾಲ ಮತ್ತು ಆತ್ಮಹತ್ಯೆ ಸಂಕೋಲೆಯಲ್ಲಿ ಸಿಲುಕಿ ನಲುಗುತ್ತಿದ್ದಾನೆ. ರೈತರ ಬದುಕು ಹಸನಾಗಲು ಬಲಿಷ್ಠ ಸಂಘಟನೆ ಅನಿವಾರ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಬರುವ ಮೇ 8ರಂದು ವಿಜಯಪುರದಲ್ಲಿ 4ನೇ ಬೃಹತ್ ರೈತ ಜಾಗೃತಿ ಸಮಾವೇಶ ಆಯೋಜಿಸಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ಹೇಳಿದರು.

ಭಾನುವಾರ ಪಟ್ಟಣದ ಪಂಜರಹುಲಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 8ರಂದು ಬೆಳಗ್ಗೆ 10 ಗಂಟೆಗೆ ವಿಜಯಪುರದ ದರಬಾರ್‌ಗ್ರೌಂಡ್ ಸ್ಟೇಶನ್ ಮುಖ್ಯ ರಸ್ತೆಯಲ್ಲಿ ಈ ಬೃಹತ್ ಸಮಾವೇಶ ನಡೆಯಲಿದೆ. ರಾಜ್ಯದ ವಿವಿಧ ಮಠಾಧೀಶರುಹಾಗೂವಿವಿಧೆಡೆಯಿಂದ ಸುಮಾರು 1 ಲಕ್ಷ ರೈತರು ಈ ಮಹಾಸಂಗಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಮುದ್ದೇಬಿಹಾಳ ತಾಲೂಕಿನ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮಾವೇಶ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸರ್ಕಾರಕ್ಕೆ ಸಕ್ಕರೆ ಕಾರ್ಖಾನೆಗಳಿಂದ ಸ್ಪಿರಿಟ್, ವಿದ್ಯುತ್ ಹಾಗೂ ಮದ್ಯದ ಮೂಲಕ ವರ್ಷಕ್ಕೆ 50 ಸಾವಿರ ಕೋಟಿಗೂ ಅಧಿಕ ಆದಾಯ ಬರುತ್ತಿದ್ದರೂ ರೈತರಿಗೆ ಮಾತ್ರ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ಕಬ್ಬಿಗೆ ಪ್ರತಿ ಟನ್‌ಗೆ ₹ 5,500 ಬೆಲೆ ನೀಡಬೇಕು ಹಾಗೂ ಸ್ವಾಮಿನಾಥನ್ ವರದಿ ಜಾರಿಗೆ ತರಬೇಕು. ಹಿಂದೆ ₹ 20 ಸಾವಿರಕ್ಕೆ ಸಿಗುತ್ತಿದ್ದ ಟಿಸಿ ಇಂದು ₹ 3 ಲಕ್ಷ ಆಗಿದೆ. ಇದು ರೈತರಿಗೆ ಆಘಾತಕಾರಿ ವಿಷಯವಾಗಿದೆ. ಆಲಮಟ್ಟಿ ಅಣೆಕಟ್ಟನ್ನು 524 ಮೀ. ಎತ್ತರಕ್ಕೆ ಏರಿಸುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ. ನಾಗರಬೆಟ್ಟದ ಏತನೀರಾವರಿ ಯೋಜನೆ ಶೇ.90ರಷ್ಟು ಮುಗಿದಿದ್ದರೂ ಇಂದಿಗೂ ಚಾಲನೆ ಸಿಕ್ಕಿಲ್ಲ. ಈ ಯೋಜನೆಗೆ ನೀಡಿದ ತಿಂಗಳ ಕಾಲಾವಧಿಯೊಳಗೆ ಪೂರ್ಣಗೊಳ್ಳದಿದ್ದರೆ, ಆಲಮಟ್ಟಿಯ ಕೆಬಿಜೆಎನ್‌ಎಲ್ ಕಚೇರಿ ಹಾಗೂ ಶಾಸಕರ ಮನೆ ಮುಂದೆ ಉಗ್ರ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.



ರೈತ ಸಂಘದ ರಾಜ್ಯಾಧ್ಯಕ್ಷ ಚುನಪ್ಪ ಪೂಜೇರಿ ಮಾತನಾಡಿ, ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿವೆ. ಕಬ್ಬು, ಈರುಳ್ಳಿ, ದ್ರಾಕ್ಷಿ, ದಾಳಿಂಬೆ ಬೆಳೆಗಾರರಿಗೆ ಬೆಂಬಲ ಬೆಲೆ ಸಿಗುತ್ತಿಲ್ಲ. ಹಳ್ಳಿಹಳ್ಳಿಗಳಲ್ಲಿ ರೈತ ಸಂಘದ ಶಾಖೆಗಳು ಆರಂಭವಾಗುವ ಮೂಲಕ ಸಂಘಟನೆ ಬಲಗೊಳ್ಳಬೇಕು. ಸಮಾವೇಶದಲ್ಲಿ ರಾಜ್ಯದ 11 ಜನ ಪ್ರಗತಿಪರ ರೈತರಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ ಹಾಗೂ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿದರು.

ತಾಲೂಕು ಅಧ್ಯಕ್ಷ ಮಹಾಂತಗೌಡ ಬಿರಾದಾರ , ಸೋಮು ಬಿರಾದಾರ, ಮುತ್ತು ಹಿರೇಮಠ, ಅಪ್ಪುಗೌಡ ಪಾಟೀಲ, ಶಿವನಗೌಡ ಗೌಡರ, ಈಶ್ವರ ಬಡಿಗೇರ, ಶಿವರಾಯ ಪ್ಯಾಟಿ ಸೇರಿದಂತೆ ಮುದ್ದೇಬಿಹಾಳ ತಾಲೂಕಿನ ರೈತಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಇದ್ದರು.

ಕರ್ನಾಟಕ ಕ್ರಿಕೆಟ್ ತಂಡ ಪ್ರಥಮ



• **ಕನ್ನಡಪ್ರಭ ವಾರ್ತೆ** ವಿಜಯಪುರ

ಏಪ್ರಿಲ್ 28 ರಿಂದ 30ರ ವರೆಗೆ ನಾಸಿಕನ ಪಂಚವಟಿ (ಒಳಾಂಗಣ ಕ್ರೀಡಾಂಗಣದಲ್ಲಿ) ನಡೆದ 14ನೇ ಅಂಡರ್ ಆರ್ಮ್ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 14 ವರ್ಷದೊಳಗಿನ ವಿಜಯಪುರದ ಬಾಲಕರ ತಂಡ ಭಾಗವಹಿಸಿ ಪ್ರಥಮ ಸ್ಥಾನ ಪಡೆದುಕೊಂಡು ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ತಂಡದ ನಾಯಕ ಮನೋಲಾಸ್, ತಂಡದ ಉಪನಾಯಕ ಮೋಹಿತ್.ಎಸ್.ಎಚ್, ದಿವಿತ್.ಎಚ್.ಎಸ್, ರಿಷಿ ಕ್.ಎನ್.ಎನ್, ದಶಾಂಕ್.ಎನ್, ಜಯಂತ. ಇ.ವಿ, ಅಭಿನವ ಅಗಡಿ, ಹೆಮಾಂಕ, ಸಾಯಿ ಧ್ರುವ ರೆಡ್ಡಿ, ನಿತೇಶ ಕುಮಾರ.ಜೆ, ಶಾಶ್ರೀಕ ಪಾಟೀಲ, ವರ್ಧನ್.ಪಿ, ಮಿಥುನ ಕಂಠಿ ಭಾಗವಹಿಸಿದ್ದರು. ರಾಷ್ಟ್ರೀಯ ಅಂಡರ್‌ಆರ್ಮ ಕ್ರಿಕೆಟ್ ಸಂಸ್ಥೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಉತ್ತಮ ಉಗಾಡೆ, ಕರ್ನಾಟಕ ರಾಜ್ಯ ಅಂಡರ್ ಆರ್ಮ ಕ್ರಿಕೆಟ್ ಸಂಸ್ಥೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಬಸವ ರಾಜ ಬಾಗೇವಾಡಿ, ಹರಿ ಮೋಹಿತೆ, ರಾಜು ಗುಲ್, ಸುನೀಲ ಡೊಮನೆ, ವಿಶ್ವರಾಜಸಿಂಗ್, ಮನೋಜ ಜಾಧವ, ಗ್ರೀಸ್ಮಾ ಉಗಾಡೆ, ತಂಡದ ತರಬೇತುದಾರರಾಗಿ ಗೋಪಾಲಕೃಷ್ಣ.ಕೆ.ಎನ್, ಮ್ಯಾನೇಜರಾಗಿ ಹೇಮಂತ.ಟಿ, ಭಾಗವಹಿಸಿದ್ದರು ಎಂದು ಸಂಗಮೇಶ ಲಿಂಗದಳ್ಳಿ ತಿಳಿಸಿದ್ದಾರೆ.

ಭಾಗ್ಯವಂತಿ ಸೈನ್ಸ್ ಕಾಲೇಜ್ ವಿದ್ಯಾರ್ಥಿಗಳ ಸಾಧನೆ

• **ಕನ್ನಡಪ್ರಭ ವಾರ್ತೆ** ತಾಳಿಕೋಟೆ

ಪಟ್ಟಣದ ಕೊಡಗಾನೂರ ಗ್ರಾಮಕ್ಕೆ ತೆರಳುವ ರಸ್ತೆಗೆ ಹೊಂದಿಕೊಂಡಿರುವ ಭಾಗ್ಯವಂತಿ ಸೈನ್ಸ್ ಪಿಯು ಕಾಲೇಜ್ ಹಾಗೂ ವರ್ಮಸ್ ನೀಟ್ ಅಕಾಡೆಮಿ ವಿದ್ಯಾರ್ಥಿಗಳು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಅಮೋಘ ಸಾಧನೆ ಮೆರೆದಿದ್ದಾರೆ. ಕಾಲೇಜಿನ ಫಲಿತಾಂಶವು ಶೇ.100ರಷ್ಟಾಗಿದ್ದು, ಲಕ್ಷ್ಮೀ ರೆಡ್ಡಿ 576 (ಶೇ.96) ಅಂಕದೊಂದಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ, ಅದ ರಂತೆ ಸಲ್ಮಾ ವಾಗಣಗೇರಿ 569(ಶೇ.94.83) ಅಂಕದೊಂದಿಗೆ ದ್ವಿತೀಯ, ಆಕಾಶ 562(ಶೇ. 93.66) ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ.



ಮೌನೇಶ 558(ಶೇ.93), ಅಕ್ಷಯ 557 (ಶೇ.92.83), ಪ್ರೇಮಾ ನಾಗರಾಳ 557 (ಶೇ.92.83), ಪೃಥ್ವಿ ಬೋರಗಿ 556 (ಶೇ. 92.66), ರೂಪಾ ದೊಡಮನಿ 554(ಶೇ. 92.33), ಐಶ್ವರ್ಯ ಗಡ್ಡಿ 547(ಶೇ.91.16), ಗಂಗೆ ಮಲ್ಲಮ್ಮ 543(ಶೇ.90.5), ಸೌಮ್ಯ ಇಲಕಲ್ಲ 541(ಶೇ.90.16), ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ 37 ಜನ ಡಿಸ್ಟಿಂಡಿಸ್ಟಿಂಕ್ಷನ್, 69 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ಫಿಜಿಕ್ಸ್ ವಿಷಯದಲ್ಲಿ 10 ವಿದ್ಯಾರ್ಥಿಗಳು 99 ಅಂಕ, ಕೆಮಿಸ್ಟ್ರಿ ವಿಷಯದಲ್ಲಿ 5 ವಿದ್ಯಾರ್ಥಿಗಳು 98 ಅಂಕ, ಗಣಿತ ವಿಷಯದಲ್ಲಿ 24 ವಿದ್ಯಾರ್ಥಿಗಳು 100ರಷ್ಟು ಅಂಕ, ಬಾಯೋಲಾಜಿ ವಿಷಯದಲ್ಲಿ 5 ವಿದ್ಯಾರ್ಥಿಗಳು96 ಅಂಕ, ಕನ್ನಡ ವಿಷಯದಲ್ಲಿ 8 ವಿದ್ಯಾರ್ಥಿಗಳು 99 ಅಂಕ, ಇಂಗ್ಲೀಷ ವಿಷಯದಲ್ಲಿ1 ವಿದ್ಯಾರ್ಥಿ 95 ಅಂಕ ಪಡೆದು ಅಮೋಘ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸುವರ್ಣ ಕನ್ನಡಿಗ ಪ್ರಶಸ್ತಿಯ ಪುರಸ್ಕೃತರು ಹಾಗೂ ಸಂಸ್ಥೆಯ ಸಂಸ್ಥಾಪಕ ಡಾ.ಐ.ಬಿ.ತಳ್ಳೊಳ್ಳಿ, ಸುವರ್ಣ ಕನ್ನಡಿಗ ಮಹಿಳಾ ಸಾಧಕಿ ಪ್ರಶಸ್ತಿ ಪುರಸ್ಕೃತೆ ಡಾ.ಸವೀತಾ ತಳ್ಳೊಳ್ಳಿ ಹಾಗೂ ಸಂಸ್ಥೆಯ ಸಿಬ್ಬಂದಿ, ವರ್ಮಸ್ ಅಕಾಡೆಮಿಯ ಮುಖ್ಯಸ್ಥರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.












ಭೂಮಿಪೂಜೆ... ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ | ರಸ್ತೆ ಕಾಮಗಾರಿಗೆ ಭೂಮಿಪೂಜೆ

ಗ್ರಾಮೀಣ ಭಾಗದ ರಸ್ತೆಗಳಿಗೆ ಹೊಸ ಮೆರಗು

• **ಕನ್ನಡಪ್ರಭ ವಾರ್ತೆ** ವಿಜಯಪುರ

ಅಭಿವೃದ್ಧಿಯ ಮೂಲಕ ಗ್ರಾಮೀಣ ಭಾಗದ ರಸ್ತೆಗಳಿಗೆ ಹೊಸ ಮೆರಗು ನೀಡಲಾಗುತ್ತಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ಯಕ್ಕುಂಡಿಯಲ್ಲಿ ಭಾನುವಾರ ಲೋಕೋಪಯೋಗಿ ಇಲಾಖೆಯಿಂದ ₹ 300 ಲಕ್ಷ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 34ರ ಯಕ್ಕುಂಡಿ, ಸಂಗಾಪುರ, ಶೇಗುಣಸಿ, ಕಾಖಂಡಕಿ ವ್ಹಾಯಾ ಹರಳಯ್ಯನಗುಂಡದಿಂದ 3 ಕಿ.ಮೀ ವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಭಾಗದ ಜನತೆಯ ಬಹುದಿನಗಳ ನಿರೀಕ್ಷೆಯಾಗಿದ್ದ ರಾಷ್ಟ್ರೀಯ ಹೆದ್ದಾರಿ 34ರಿಂದ ಹರಳಯ್ಯನಗುಂಡ ರಸ್ತೆಯ ವರೆಗೆ ಈ ಕಾಮಗಾರಿ ನಡೆಯಲಿದೆ. ಇದರಿಂದ ಯಕ್ಕುಂಡಿ, ಸಂಗಾಪುರ, ಶೇಗುಣಸಿ ಹಾಗೂ ಕಾಖಂಡಕಿ ಜನರಿಗೆ ಹಾಗೂ ಸುಕ್ಷೇತ್ರ ಹರಳಯ್ಯನಗುಂಡಕ್ಕೆ ಆಗಮಿಸುವ ಭಕ್ತರಿಗೆ ಅನುಕೂಲವಾಗಲಿದೆ. ಅಷ್ಟೇ ಅಲ್ಲ, ಈ ಕಾಮಗಾರಿ ಪೂರ್ಣಗೊಂಡ ನಂತರ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ರಸ್ತೆ ಸಂಚಾರ ಮತ್ತಷ್ಟು ಸುಲಭವಾಗಲಿದೆ ಎಂದರು.ಬಬಲೇಶ್ವರ ಮತಕ್ಷೇತ್ರದಲ್ಲಿ ಕೆರೆ ತುಂಬಿಸುವ ಯೋಜನೆಗೆ ಪೂರಕವಾಗಿ ಈಗ ಹಳ್ಳಗಳನ್ನು ತುಂಬಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಮತಕ್ಷೇತ್ರದಲ್ಲಿ, ನೀರಾವರಿಗೆ ಪೂರಕವಾಗಿ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಒತ್ತು ನೀಡಲಾಗಿದೆ. ಶೈಕ್ಷಣಿಗ ಗುಣಮಟ್ಟ ಸುಧಾರಣೆ, ರಸ್ತೆಗಳ ಅಭಿವೃದ್ಧಿ, ಹೈನುಗಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸಲು ನಾನಾ ಯೋಜನೆಗಳಿವೆ ಚಾಲನೆ ನೀಡಲಾಗಿದೆ. ರೈತರು ಖುಷಿಯಾಗಿದ್ದರೆ ನಾಡು ಸಮೃದ್ಧಿಯಿಂದ ಕೂಡಿರುತ್ತದೆ ಎಂಬ ತತ್ವದಡಿ ಕಾಯಕ ನಿರತರಾಗಿರುವುದಾಗಿ ಸಚಿವ ಎಂ.ಬಿ.ಪಾಟೀಲ ಹೇಳಿದರು.



ಮುಖಂಡ ಚನ್ನಪ್ಪ ಕೊಪ್ಪದ ಮಾತನಾಡಿ, ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ ನೀಡಿದ್ದರಿಂದ ಈ ಭಾಗದ ಜನರು ಸುತ್ತುಬಳಸಿ ಬೇರೆ ಮಾರ್ಗಗಳ ಮೂಲ ಸಂಚರಿಸುವುದು ತಪ್ಪಲಿದೆ. ಸಮಯ ಉಳಿತಾಯದ ಜೊತೆ ವಾಹನಗಳ ತೈಲ ವೆಚ್ಚವೂ ಕಡಿಮೆಯಾಗಲಿದೆ ಎಂದರು.

ಯಕ್ಕುಂಡಿಯ ವೀರೇಶ್ವರ ಶರಣರು, ಮುಖಂಡರಾದ ವಿ.ಎಸ್.ಪಾಟೀಲ, ಮಲ್ಲು ದಳವಾಯಿ, ರಮೇಶ ದೇಸಾಯಿ, ಬಾಬುಗೌಡ ಪಾಟೀಲ, ನಾಗರಾಜ ಕುಲಕರ್ಣಿ, ಪ್ರಭುಗೌಡ ಪಾಟೀಲ, ಶೇಖಪ್ಪ ಕೊಪ್ಪದ, ಮಲ್ಲಪ್ಪ ಕೆಂಪವಾಡ, ಮಹೇಶ ಮಾಳಿ, ರಫೀಕ್ ಸೋನಾರ, ಜಾಫರ್‌ನಿಡೋಣಿ, ವಿದ್ಯಾರಾಣಿ ತುಂಗಳ, ದಾನಮ್ಮ ಜಿರಲಿ, ಕಾವ್ಯ ಪಡತಾರೆ, ರಂಗಪ್ಪ ಪೂಜಾರಿ, ಮಾದೇವಪ್ಪ ಮೆಂಡೆಗಾರ, ಬುಡ್ಡಸಾಬ್ ಜಮಾದಾರ, ಇಸಾಕಸಾಬ್ ಜಮಾದಾರ, ಮುತ್ತಪ್ಪ ಪೂಜಾರಿ, ರಾಜಸಾಬ ಜಮಾದಾರ, ಪರಶುರಾಮ ಪಡಗಾರ, ರಾಜೇಸಾಬ್ ಗಲಗಲಿ, ಅಬ್ಬಾಸಲಿ ಕಮತೆ, ಸವಿತಾ ವಗ್ಗರ, ಸುರೇಶ ಪೂಜಾರಿ, ರಮೇಶ ತಂಬಾಕೆ, ಗ್ರಾಮದ ಹಿರಿಯರು ಹಾಗೂ ಯುವಕರು ಉಪಸ್ಥಿತರಿದ್ದರು.

ಶಿಕ್ಷಣ ಹರಿಯುವ ನೀರಿನಂತೆ ನಿತ್ಯ ನೂತನ

• **ಕನ್ನಡಪ್ರಭ ವಾರ್ತೆ** ಸಿಂದಗಿ

ಶಿಕ್ಷಣ ಹರಿಯುವ ನೀರಿನಂತೆ ನಿತ್ಯ ನೂತನವಾಗಿರುತ್ತದೆ. ವಿದ್ಯಾರ್ಥಿಗಳು ನಿತ್ಯ ಶೈಕ್ಷಣಿಕ ಕ್ಷೇತ್ರದಲ್ಲಾಗುವ ಹೊಸ ಸಂಶೋಧನೆ, ಅನ್ವೇಷಣೆ ಕುರಿತು ತಿಳಿದುಕೊಂಡು ಜ್ಞಾನದ ಹರಿವು ಹೆಚ್ಚಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಪದಕ ಪುರಸ್ಕೃತ, ಸಿಂದಗಿ ಪಿಎಸ್‌ಐ ಶ್ರೀಕಾಂತ ಕಾಂಬಳೆ ಹೇಳಿದರು.

ನಗರದ ಸಾರಂಗಮಠದ ಲಿಂ.ಸಿದ್ದಲಿಂಗ ಮಹಾಸ್ವಾಮೀಜಿ ಕಾನ್ಫರೆನ್ಸ್ ಹಾಲ್‌ನಲ್ಲಿ ಆಗಿ ಹುಣ್ಣಿಮೆಯ ನಿಮಿತ್ತ ಚನ್ನವೀರ ಸ್ವಾಮೀಜಿ ಪ್ರತಿಷ್ಠಾನದಿಂದ ಆಯೋಜಿಸಿದ್ದ 354ನೇ ಸದ್ವಿಚಾರ ಗೋಷ್ಠಿಯಲ್ಲಿ ಶ್ರೀಮಠದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಶಾಲೆ-ಕಾಲೇಜಿನಲ್ಲಿ 5-6 ಗಂಟೆ ಮಾತ್ರ ಮಕ್ಕಳಿರುತ್ತಾರೆ. ಉಳಿದಅವಧಿಯಲ್ಲಿಮಕ್ಕಳುಮನೆಯಲ್ಲಿತಂದೆ-ತಾಯಿಯೊಂದಿಗೆ ಇರುತ್ತಾರೆ. ಮನೆಯಲ್ಲಿ ಪಾಲಕರು ಮಕ್ಕಳಿಗೆ ಮಾದರಿಯಾಗಿರಬೇಕು. ಮಕ್ಕಳಿಗೆ ಮೌಲ್ಯಯುತ ಸಂಸ್ಕಾರ ನೀಡಬೇಕೆಂದರು.

ಶ್ರೀಮಠದ ಪೀಠಾಧಿಪತಿ ಡಾ.ಪ್ರಭುಸಾರಂ ಗದೇವ ಶಿವಾಚಾರ್ಯರು ಮಾತನಾಡಿ, ಸಾಧನೆ ಮಾಡಲು ಮನುಷ್ಯನಿಗೆ ಗುರಿ ಮುಖ್ಯ. ಅದನ್ನು ಸಂಪಾದಿಸಲು ಪರಿಶ್ರಮ ಅತೀ ಪ್ರಮುಖವಾಗುತ್ತದೆ. ಮಹಿಳಾ ಮಹಾವಿದ್ಯಾಲಯ ಉತ್ತ ಮ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎನ್ನುವುದಕ್ಕೆ ಇಂದಿನ ಸಾಧನೆ ಮಾಡಿರುವ ವಿದ್ಯಾರ್ಥಿಗಳೇ ಉದಾಹರಣೆ. ಬಡತನವನ್ನು ಮೆಟ್ಟಿ ನಿಂತು ಸಾಧನೆ ಮಾಡುವುದೇ ನಿಜವಾದ ಸಾಧನೆ. ಸಾಧನೆಗೆ ಛಲ ಇದ್ದರೆ ಬದುಕು ಬಂಗಾರವಾಗುತ್ತದೆ. ಆಟದಲ್ಲಿಯೂ ವಿದ್ಯಾರ್ಥಿಗಳು ಸಾಧನೆ ಮಾಡಬೇಕು. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಒಳ್ಳೆಯ ವಿದ್ಯಾಭ್ಯಾಸ ಮಾಡಿ ಹೆಚ್ಚಿನ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು. ಪದ್ಮರಾಜ ಕಾಲೇಜಿ ನ ಪ್ರಾಚಾರ್ಯೆ ಜೆ.ಸಿ. ನಂದಿಕೋಲ, ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ (ಚಿನ್ನದ ಪದಕ) ಪಡೆದ ವಿದ್ಯಾರ್ಥಿನಿ ಮೀನಾಜ ಗೋಲಗೇರಿ, 4ನೇ ಸ್ಥಾನ ಪಡೆದ ವಿದ್ಯಾ ರ್ಥಿನಿ ರಿಯಾನಾಬೇಗಂ ಬಂಕಲಗಿ ಸನ್ಮಾನಿಸಿದರು.ವಿದ್ಯಾರ್ಥಿನಿಯರಾದ ಸಿದ್ದಮ್ಮ ಬಿರಾದಾರ ಹಾಗೂ ಶೈಲಜಾ ಪಾಟೀಲ ಅವರಿಗೆ ಪ್ರತಿಷ್ಠಾನದಿಂದ ಸನ್ಮಾನಿಸಿ ಗೌರವಿಸಲಾಯಿತು. ಸದ್ವಿಚಾರ ಗೋಷ್ಠಿ ಯಲ್ಲಿ ಅಶೋಕ ವಾರದ, ಅಶೋಕ ಬೂದಿಹಾಳ, ಡಾ.ರವಿ ಗೋ ಲಾ, ವಿಶ್ವಾನಾಥ ನಂದಿಕೋಲ, ಚನ್ನಪ್ಪ ಕತ್ತಿ, ಎಸ್.ಎಂ.ಪೂಜಾರಿ, ಭೀಮಾಶಂಕರ ಅರಳಗುಂಡಗಿ, ಡಾ.ನಾಗರಾಜ ಮುರಗೋಡ, ಮುಕ್ತಾಯಕ್ಕ ಕತ್ತಿ, ಮಂಗಳಾ ಈಳಗೇರ, ಭಾಗ್ಯಶ್ರೀ ನಂದಿಮಠ, ಹೇಮಾ ಕಾಸರ, ಭಾಗ್ಯ ಬಬಲೇಶ್ವರ, ಭೀಮಾಶಂಕರ ಪಾಸೋಡಿ, ಶಕುಂತಲಾ ಹಿರೇಮಠ, ಜಿ.ಎ.ನಂದಿಮಠ, ಸರೋಜಿನಿ ಹಿರೇಮಠ ಇದ್ದರು.

